ಶ್ರೀ ಕುಂದೂರು ರುದ್ರಪ್ಪ.—ಐದು ಬಸ್ಸುಗಳು ಓಡಾಡುತ್ತವೆಂದು ಹೇಳುತ್ತೀರಿ. ಈ ಮಾರ್ಗದಲ್ಲಿ 14 ಸರ್ವೀಸುಗಳು ಓಡಾಡುತ್ತವೆಂದು ನಾನು ಹೇಳುತ್ತೇನೆ. ಏನು ಹೇಳುತ್ತೀರಾ?

ಶ್ರೀ ಬಿ. ಡಿ. ಜತ್ತಿ.—ತಾವು ಹೇಳಬಹುದು. ನಮ್ಮ ಇನ್‌ಫರ್‌ಮೇಶನ್ ಪ್ರಕಾರ ಹೀಗಿದೆ.

ಶ್ರೀ ಕುಂದೂರು ರುದ್ರಪ್ಪ.—ಈ ರಸ್ತೆಗಳಲ್ಲಿ 4 ಹಳ್ಳಗಳಿವೆ ಎಂದು ಹೇಳಿದ್ದೀರಿ. ಏಳು ಹಳ್ಳಗಳಿವೆ ಎಂದು ನಾನು ಹೇಳುತ್ತೇನೆ, ಏನು ಹೇಳುತ್ತೀರಿ?

ಶ್ರೀ ಬಿ. ಡಿ. ಜತ್ತಿ.—ತಾವು ತಮ್ಮ ಸ್ವಂತ ಡೆಫಿನಿಶನಪ್ರಕಾರ ಹೇಳುತ್ತಿರಬಹುದು ಯಾವ ರೀತಿ ಹಳ್ಳ ಎಂಬ ಪದಕ್ಕೆ ಡೆಫಿನಿಷನ್ ನೀವು ಇಟ್ಟು ಕೊಂಡಿದ್ದೀರೋ, ಆದರ ಪ್ರಕಾರ ಆಗಬಹುದು.

ಶ್ರೀ ಕುಂದೂರು ರುದ್ರಪ್ಪ.—ಹಳ್ಳ ಬೇಡ, ನರೋವರ ಎಂದು ಹೇಳುತ್ತೇನೆ, ಒಪ್ಪುತ್ತೀರಾ?

ಶ್ರೀ ಬಿ. ಡಿ. ಜತ್ತಿ.—ಹೇಳಬಹುದು, ನಾನು ಒಪ್ಪುವುದಕ್ಕಾಗುವುದಿಲ್ಲ.

ಶ್ರೀ ಕುಂದೂರು ರುದ್ರಪ್ಪ.—ಬ್ರಿಜ್‌ಗಳನ್ನು ಈ ವರ್ಷ ಕಂಪ್ಲೀಟ್ ಮಾಡುತ್ತೀರಾ?

ಶ್ರೀ ಬಿ. ಡಿ. ಜತ್ತಿ.—ಈ ವರ್ಷದ ಬಜೆಟ್ ತಾವೇ ಪಾಸ್ ಮಾಡಿದ್ದೀರಿ. ಅಗತ್ಯ ಎಂದು ಅಪ್ಪಣೆ ಕೊಡಿಸಿದರೆ, ಆ ರೀತಿ ಮಾಡಬಹುದು.

ಶ್ರೀ ಕುಂದೂರು ರುದ್ರಪ್ಪ.—ಎಂಟು-ಹತ್ತು ಸಾವಿರ ರೂಪಾಯಿಗಳು ಮಾತ್ರ ಖರ್ಚಾಗಬಹುದು ಎಂದು ತಿಳಿಸಿದರೆ, ಬೇಗ ಕೆಲಸ ತೆಗೆದುಕೊಳ್ಳುತ್ತೀರಾ?

ಶ್ರೀ ಬಿ. ಡಿ. ಜತ್ತಿ.—ರಿಪೇರಿಗಳು ಏನಾದರೂ ಮಾಡಬಹುದೇ ಹೊರತು, ಹೊಸ ಬಜೆಟ್ ಐಟಮ್ಮನ್ನು ಅಪ್ಪಣೆ ಕೊಡಿಸುವುದಕ್ಕಾಗುವುದಿಲ್ಲ.

ಶ್ರೀ ಕುಂದೂರು ರುದ್ರಪ್ಪ.—ಎಸ್ಟಿಮೇಟ್ ಪ್ರಕಾರ ಮೂರು ರಸ್ತೆಗಳು ಕಂಪ್ಲೀಟ್ ಆಗುತ್ತವೆ ಎಂದು ಭರವಸೆಯನ್ನು ಕೊಡುತ್ತೀರಾ?

ಶ್ರೀ ಬಿ. ಡಿ. ಜತ್ತಿ.—ಭರವಸೆಯನ್ನು P.W.D. ಮಿನಿಸ್ಟರು ಕೊಡುತ್ತಾರೆ. ಎಸ್ಟಿಮೇಟ್ ಆಗಿದ್ದು ಎಷ್ಟು ಹಳ್ಳ ಎಷ್ಟು ಬಿಡ್ಜಸ್ ಎಂದು ಹೇಳಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸಪ್ಲಿಮೆಂಟ (a) ಗೆ ಉತ್ತರವಾಗಿ ತಾವು 5 ಎಂದು ಹೇಳುತ್ತೀರಿ. ಅವರು 14 ಸರ್ವೀಸ್ ಎಂದು ಹೇಳುತ್ತಾರೆ. ಈ 14 ಸರ್ವೀಸುಗಳಲ್ಲಿ ಶ್ರೀ ರುದ್ರಪ್ಪನವರದು ಎಷ್ಟು ಸರ್ವೀಸ್ ಇದೆ?

Sri B. D. JATTI.—Notice may be given.

ಶ್ರೀ ಕೆ. ಎರ್. ನರಸಿಂಹಯ್ಯ.—ರಸ್ತೆಗಳು ಸೇತುವೆಗಳು ಆಗಿಲ್ಲ ಎಂದು ಹೇಳುತ್ತಾರೆ. ರಸ್ತೆ ನರಿಯಾಗಿ ಇದ್ದರೆ, ಬಸ್ ಓಡಾಡುವುದಕ್ಕೆ ಎಗ್ಜಿಕ್ಯೂಟೀವ್ ಇಂಜಿನಿಯರ್ ಪರ್ಮಿಷನ್ ಕೊಡುತ್ತಾರೆ.

ಶ್ರೀ ಬಿ. ಡಿ. ಜತ್ತಿ.—ನಣ್ಣ ಹಳ್ಳ ದಾಟುವುದಕ್ಕೆ ಮಳೆಗಾಲದಲ್ಲಿ ಒಂದುಗಂಟೆ. ಎರೆಡುಗಂಟೆ ಹೊತ್ತು ಹಿಡಿಯುತ್ತದೆ ಅದರಿಂದ ತಡವಾಗುತ್ತದೆ. ಅದರ ಮೇರೆ ಬ್ರಿಡ್ಜ್‌ಕಟ್ಟುವುದಕ್ಕೆ ಪ್ರಾರಂಭ ಮಾಡಿದ್ದಾರೆ.

Starting of Co-operative Marketing Society in Hangal Taluk.

*Q.—499. Sri B. R. PATIL (Hangal)—

Will the Government be pleased to state:—

(a) whether they have received representation to start a Co-operative Marketing Society in Hangal Taluk, Dharwar District;

(b) if so, whether they intend to start the said Society early?

A.—Sri MALI MARIAPPA (Minister for Co-operation).—

(a) Yes.

(b) The matter is under examination.

ಶ್ರೀ ಬಿ. ಆರ್. ಪಾಟೀಲ್.—1958ನೆಯ ಇಸವಿ ಫೆಬ್ರವರಿ 18ನೆಯ ತಾರೀಖಿನ ದಿವಸ ಹಾನಗಲ್ ತಾಲ್ಲೂಕು ಅಕ್ಕಿ ಆಲೂರ್ ಅಸಿಸ್ಟೆಂಟ್ ರಿಜಿಸ್ಟ್ರಾರ್ ಅವರು ಮಾರ್ಕೆಟಿಂಗ್ ಸೊಸೈಟಿ ಪ್ರೀಟಿಂಗ್‌ಅನ್ನು ಕರೆದಾಗ ನಹಾಯಬೇಕು ಎಂದು ಹೇಳಿದುದಕ್ಕೆ ವಿಚಾರ ಮಾಡುತ್ತೇವೆಂದು ತಿಳಿಸಿದ್ದಾರೆಯೇ?

ಶ್ರೀ ಮಾಲ ಮರಿಯಪ್ಪ.—ಮಾನ್ಯ ನದಸ್ಯರಿಗೆ ಗೊತ್ತಿರುವಹಾಗೆ ಅಕ್ಕಿ ಆಲೂರಿನಲ್ಲಿ ಒಂದು ಬ್ರಾಂಚ್ ಇದೆ. ಪುನಃ ಇನ್ನೊಂದು ಮಾಡುವುದಾದರೆ ಅಲ್ಲಿ ಕಾಂಪಿಟಿಷನ್ ಪ್ರಾರಂಭವಾಗುತ್ತದೆ. ಅವರೇ ಬೇಕಾದರೆ ಇಂಡಿಪೆಂಡೆಂಟ್ ಸೊಸೈಟಿ ಮಾಡಬಹುದು ಕರೆಸ್‌ಪಾಂಡೆನ್ಸ್‌ನಲ್ಲಿ ಇದೆ; ನಿಧಾನವಾಗಿದೆ.

ಶ್ರೀ ಬಿ. ಆರ್. ಪಾಟೀಲ್.—ಪಂಚವಾರ್ಷಿಕ ಯೋಜನೆಯಲ್ಲಿ ಅಲಾಟ್ ಮಾಡಿದ್ದಾರೆ. ಪಂಚವಾರ್ಷಿಕಯೋಜನೆಯೊಳಗೆ ಡೈರೆಕ್ಷನ್ ಇಲ್ಲವೇ?

ಶ್ರೀ ಮಾಲ ಮರಿಯಪ್ಪ.—ಹಿಂದಕ್ಕೆ ತೆಗೆದುಕೊಳ್ಳಬೇಕು ಅಥವಾ ನಮ್ಮ ಸೊಸೈಟಿ ಮಾರ್ಕೆಟಿಂಗ್ ಸೊಸೈಟಿಯ ಕಾರ್ಯ ಕರಾಪಗಳನ್ನು ನಡೆನಬೇಕು ಎಂದು ನರ್ಕಾರ ಒಂದು ಹೇಳಿಕೆ ಕೊಟಿದೆ. ಎರೆಡರಲ್ಲಿ ಯಾವುದಾದರೂ ಒಂದಕ್ಕೆ ಒಪ್ಪಿಕೊಳ್ಳಿ, ಎಂದು ಕೇಳಿದೆ. ಅವರು ಇನ್ನೂ ಜವಾಬು ಕಳುಹಿನಲಿಲ್ಲ.

ಶ್ರೀ ಬಿ. ಆರ್. ಪಾಟೀಲ್.—ಆದಷ್ಟು ಬೇಗ ಜನಗಳ ನೌಕರ್ಯಕ್ಕೋನ್ಸರ ಮಾರ್ಕೆಟಿಂಗ್ ಸೊಸೈಟಿ ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಮಾಲ ಮರಿಯಪ್ಪ.—ತೀವ್ರವಾಗಿ ಪ್ರಯತ್ನ ಮಾಡುತ್ತೇವೆ.

Measures for Economy in Administration.

*Q.—511. Sri S. SUBBAYA NAIK (Puttur).—

Will the Government be pleased to state:—

(a) the measures adopted by them to effect economy in the expenditure of each Department;

(SRI S. SUBBAYA NAIK)

(*b*) whether any scheme has been implemented in this behalf;

(*c*) if so, the results thereof ?

A.—SRI B. D. JATTI (Chief Minister).—

(*a*), (*b*) and (*c*) Reply to a similar question has been furnished before; *vide* answer to L.A. Question No. 51 by Shri B. G. Khot, which was answered on the floor of the Assembly on 11th March 1959.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಉಪಪ್ರಶ್ನೆಯನ್ನು ಕೇಳುವುದಕ್ಕೆ ಇಚ್ಛಿಸುವುದಿಲ್ಲ.

Stone Revetment to the Bund of Kungunte Tank in Ronoor Hobli.

*Q.—539. SRI B. L. NARAYANA SWAMY (Mulbagal).—

Will the Government be pleased to state :—

(*a*) whether they are aware that the estimate for the stone revetment to the bund of Kungunte tank in Ronoor Hobli, Srinivaspur Taluk, Kolar District is pending execution since more than six years;

(*b*) the reasons for the delay in taking up the work;

(*c*) whether they will take steps towards its speedy execution ?

A.—SRI H. M. CHANNABASAPPA (Minister for Public Works and Electricity).—

(*a*) Yes, for the last five years.

(*b*) The Contractor failed to do work in time.

(*c*) Yes.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಉಪಪ್ರಶ್ನೆ (b) ಗೆ ಉತ್ತರವಾಗಿ ಕಂಟ್ರಾಕ್ಟರು ಸಕಾಲದಲ್ಲಿ ಈ ಕಾಮಗಾರಿಯನ್ನು ಕೈಗೊಳ್ಳಲು ತಪ್ಪಿದ್ದರು ಎಂದು ಹೇಳಿದ್ದೀರಿ. ಕಂಟ್ರಾಕ್ಟರು ಐದು ವರ್ಷಗಳಿಂದ ಕೆಲಸ ಮಾಡುವುದಿಲ್ಲ ಎಂದು ಹೇಳಿದ್ದಾರೆ. ಸರ್ಕಾರದವರು ಏನು ಮಾಡುತ್ತಿದ್ದಾರೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರಿಗೆ ನೋಟೀಸ್ ಕೊಟ್ಟು ಫೈನ್ ಮಾಡಿ ಎಲ್ಲಾ ಕಾರ್ಯಕ್ರಮಗಳನ್ನು ತೆಗೆದುಕೊಂಡರೂ ಮಾಡಿಲ್ಲ. ಆದುದರಿಂದ ಅದು ಬಹಳ ನಿಧಾನವಾಗಿದೆ ಎನ್ನುವುದು ಸರ್ಕಾರ ಒಪ್ಪಿಕೊಳ್ಳತ್ತದೆ. ತಕ್ಷಣದಲ್ಲಿ ಮಾಡಿ ಕೊಡುತ್ತೇವೆ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಅದೇ ಕಂಟ್ರಾಕ್ಟರೋ ಅಥವಾ ಬೇರೆ ಕಂಟ್ರಾಕ್ಟರಿಗೆ ಕೊಟಿದ್ದಾರೆಯೋ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೆಲಸ ಆಗಿಲ್ಲ ಎಂದು ಕಂಡು ಬರುತ್ತದೆ. ಬೇರೆ ಇದ್ದರೆ ಅವರಿಂದ ಮಾಡಿಸಿಕೊಡುತ್ತೇವೆ.

Deputy Panchayat and Panchayat Executive Officers in the Integrated Areas.

*Q.—549. SRI MANJAPPA ULLAL (Karkal).—

Will the Government be pleased to state :—

(*a*) the number of Deputy Panchayat Officers working in Madras-Karnatak, Hyderabad Karnatak and Bombay Karnatak areas;

(*b*) the number of Panchayat Executive Officers working in these areas ?

(*c*) out of the above, the number of Harijan Officers and those who belong to Backward Classes and other Communities;

(*d*) the number of Deputy Panchayat Officers and Executive Officers required for the whole State ?

A.—SRI T. SUBRAMANYA (Minister for Law, Labour and Local Self-Government).—

(*a*)	Madras Karnatak	... 6
	Hyderabad Karnatak	... Nil
	Bombay Karnatak	... Nil
(*b*)	Madras Karnatak	... 8
	Hyderabad Karnatak	... Nil
	Bombay Karnatak	... Nil
(*c*)	Harijans	... 2 Executive Officers
	Backward Classes.	4 Deputy Panchayat Officers.
		3 Executive Officers.
	Other Communities.	2 Deputy Panchayat Officers.
		3 Executive Officers.

(*d*) This can only be determined after the new bill is passed into an Act.

ಶ್ರೀ ಮಂಜಪ್ಪ ಉಳ್ಳಾಲ್.—(c) ಪ್ರಶ್ನೆಗೆ ಉತ್ತರವಾಗಿ ಹರಿಜನರು ಇಬ್ಬರು ಎಗ್ಸಿಕ್ಯುಟೀವ್ ಆಫೀಸರ್ ಆಗಿ ಕೆಲಸಮಾಡುತ್ತಿದ್ದಾರೆಂದು ಹೇಳಿದ್ದೀರಿ, ಅವರು ಪರ್ಮನೆಂಟಾಗಿ ಕೆಲಸಮಾಡುತ್ತಿದ್ದಾರೆಯೇ ಅಥವಾ ಹಂಗಾಮಿಯಾಗಿ ಕೆಲಸ ಮಾಡುತ್ತಿದ್ದಾರೆಯೇ ?

ಶ್ರೀ ಟಿ. ಸುಬ್ರಹ್ಮಣ್ಯ.—ಬೊಂಬಾಯಿ ಕರ್ನಾಟಕ ಏರಿಯಾದಲ್ಲಿ ಇದ್ದಾರೆಂದು ಕಾಣುತ್ತದೆ. ನನಗೆ ಸರಿ